(ಗೊಂದಲ)

ಶ್ರೀ ಬಿ.ಬಿ ನಿಂಗಯ್ಯ : ಮಲೆನಾಡಿನಲ್ಲಿ ವಿಸ್ತಾರವಾದ ಪ್ರದೇಶವಿರುವುದು ತಮಗೆ ಗೊತ್ತಿರುವ ವಿಷಯ. ಕಳಸಾವನ್ನೂ ಕೂಡ ತಾಲ್ಲೂಕನ್ನಾಗಿ ಮಾಡಿಕೊಡಬೇಕೆಂದು ನಾನು ವಿನಂತಿಸುತ್ತೇನೆ.

ಅಧ್ಯಕ್ಷರು : ಪರಿಶೀಲನೆ ಮಾಡುತ್ತೇವೆ ಎಂದು ಹೇಳಿ

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ಪರಿಶೀಲನೆ ಮಾಡುತ್ತೇವೆ.

(ಗೊಂದಲ)

ಅಧ್ಯಕ್ಷರು :It is a policy matter It is under consideration

Excessive Rainfall and drought

12(161) ಶ್ರೀ ಡಾ.ಗುರುಪಾದಪ್ಪ ನಾಗಮಾರಪ್ಪಳಿ (ಬೀದರ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ಸಂಭವಿಸಿರುವ ಅತೀವೃಷ್ಟಿ ಮತ್ತು ಅನಾವೃಷ್ಟಿಯಿಂದ ಇಲ್ಲಿಯವರೆವಿಗೂ ವಿವಿಧ ಜಿಲ್ಲೆಗಳಿಗೆ ಸಂಭವಿಸಿರುವ ನಷ್ಟದ ಮೊತ್ತವೆಷ್ಟು (ನಷ್ಟದ ಸಂಪೂರ್ಣ ಮಾಹಿತಿಯನ್ನು ಜಿಲ್ಲಾವಾರು ಅಂಕಿ ಅಂಶಗಳಲ್ಲಿ ಒದಗಿಸುವುದು)

ಆ) ಸರ್ಕಾರ ಈ ನಷ್ಟವನ್ನು ತುಂಬಿಕೊಡಲು ತನ್ನ ಪಾಲಿನ ಎಷ್ಟು ಹಣವನ್ನು ಇಲ್ಲಿಯವರೆವಿಗೂ ಪ್ರತಿ ಜಿಲ್ಲೆಗೆ ಬಿಡುಗಡೆ ಮಾಡಿದೆ. ಈ ಹಣದಿಂದ ಪ್ರತಿ ಜಿಲ್ಲೆಯಲ್ಲಿ ಕೈಗೊಂಡಿರುವ ಪರಿಹಾರ ಕಾರ್ಯಗಳೇನು (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

ಇ) ಕೇಂದ್ರ ಸರ್ಕಾರದ ಪ್ರತಿನಿಧಿಗಳ ತಂಡ ಇತ್ತೀಚಿಗೆ ರಾಜ್ಯದ ಯಾವ ಜಿಲ್ಲೆಗಳಿಗೆ ಭೇಟಿ ನೀಡಿ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ರಾಜ್ಯ ಸರ್ಕಾರವು ಕೇಂದ್ರದಿಂದ ಎಷ್ಟು ಮೊತ್ತದ ನೆರವನ್ನು ಕೋರಿ ಪ್ರಸ್ತಾವನೆ ಸಲ್ಲಿಸಿದೆ:

ಈ) ರಾಜ್ಯದಲ್ಲಿನ ಅತೀವೃಷ್ಟಿ ಮತ್ತು ಅನಾವೃಷ್ಟಿ ಸ್ಥಿತಿಯನ್ನು ಎದುರಿಸುವ ಸಲುವಾಗಿ ಕೇಂದ್ರ ಸರ್ಕಾರ ಇಲ್ಲಿಯವರೆಗೆ ಎಷ್ಟು ಮೊತ್ತದ ನೆರವನ್ನು ರಾಜ್ಯಕ್ಕೆ ಬಿಡುಗಡೆ ಮಾಡಿದೆ.

ಉ) ರಾಜ್ಯದ ಪರಿಸ್ಥಿತಿಯನ್ನು ಮನವರಿಕೆ ಮಡಿಕೊಡಲು ರಾಜ್ಯ ಸರ್ಕಾರ ಸರ್ವ ಪಕ್ಷಗಳ ನಿಯೋಗವನ್ನು ಕೇಂದ್ರಕ್ಕೆ ಕಳುಹಿಸಿಕೊಡುವುದೇ?

ಶ್ರೀ ವಿ ಶ್ರೀನಿವಾಸ ಪ್ರಸಾದ್ (ಮಾನ್ಯ ಕಂದಾಯ ಸಚಿವರು)

ಅ) ಪ್ರಸಕ್ತ ಸಾಲಿನಲ್ಲಿ ಅತೀವೃಷ್ಟಿಯಿಂದ– ರೂ 2,742.14 ಕೋಟಿ. ಅನಾ ವೃಷ್ಟಿಯಿಂದ – ರೂ.1,719 ಕೋಟಿ ಹಾನಿ ಸಂಭವಿಸಿರುತ್ತದೆ. ಜಿಲ್ಲಾ ವಾರು ವಿವರವನ್ನು ಅನುಭಂದ – 1ರಲ್ಲಿ ನೀಡಲಾಗಿದೆ

ಆ) ರಾಜ್ಯ ಸರ್ಕಾರವು ಇಲ್ಲಿಯವರೆಗೆ ಬರ ಪರಿಹಾರಕ್ಕೆ ರೂ.72.66 ಕೋಟಿ ಪ್ರವಾಹ ಪರಿಹಾರಕ್ಕೆ ರೂ.125.67 ಕೋಟಿ (ಕೊಳೆ ರೋಗ ಪರಿಹಾರಕ್ಕೆ ರೂ.72.00 ಕೋಟಿ) ಅನುದಾನ ಬಿಡುಗಡೆ ಮಾಡಲಾಗಿದೆ ಜಿಲ್ಲಾವಾರು ವಿವರ ಅನುಬಂಧ –2. ರಲ್ಲಿ ನೀಡಿದೆ.

ಇ) ಕೇಂದ್ರ ಸರ್ಕಾರದಿಂದ ಅತಿವೃಷ್ಟಿ ಹಾನಿಯ ಬಗ್ಗೆ ವೀಕ್ಷಿಸಲು ಶ್ರೀ.ಆರ್. ಕೆ.ಶ್ರೀವಾತ್ಸವ. ಜಂಟಿ ಕಾರ್ಯದರ್ಶಿಗಳು (ಕೆ) ಗೃಹ ಮಂತ್ರಾಲಯ. ನವದೆಹಲಿರವರ ನೇತೃತ್ವದಲ್ಲಿ 6 ಜನರ ಅಧ್ಯಯನ ತಂಡವು ದಿನಾಂಕ 23/09/2013 ರಿಂದ 26/09/2013ರವರೆಗೆ ರಾಜ್ಯದ ಬೆಳಗಾವಿ. ಕಾರವಾರ, ಶಿವಮೊಗ್ಗ, ಚಿಕ್ಕಮಂಗಳೂರು. ದಕ್ಷಿಣಕನ್ನಡ, ಉಡುಪಿ, ಹಾಗೂ ಕೊಡಗು ಜಿಲ್ಲೆಗಳಿಗೆ ಭೇಟಿ ನೀಡಿದೆ.

ಅತಿವೃಷ್ಟಿಯಿಂದ ಹಾನಿಯಾಗಿರುವುದಕ್ಕೆ ಪರಿಹಾರ ನೀಡಲು ರೂ.610.84 ಕೋಟಿಗಳ ನೆರವು ಕೋರಿ ಕೇಂದ್ರ ಸರ್ಕಾರಕ್ಕೆ ಮೆಮೋರಾಡಂ ಸಲ್ಲಿಸಲಾಗಿದೆ.

ರಾಜ್ಯಾದಂತ ಜೂನ್ 1 ರಿಂದ ಅಕ್ಟೋಬರ್ 15 ರವರೆಗೆ ಸುಮಾರು 64 ತಾಲ್ಲೂಕುಗಳನ್ನು ಕೇಂದ್ರ ಸರ್ಕಾರದ ನಿಯಮದಂತೆ ಬರ ಪರಿಸ್ಥಿತಿ

ಎದುರುಸುತ್ತಿದ್ದು. ಬರ ಪರಿಸ್ಥಿತಿಯಿಂದ ರಾಜ್ಯದ್ಯಂತ ರೂ.1719 29 ಕೋಟಿ ಅಂದಾಜು ಹಾನಿಯಾಗಿದ್ದು ಕೇಂದ್ರ ಸರ್ಕಾರಕ್ಕೆ ರೂ.1014 15 ಕೋಟಿ ಆರ್ಥಿಕ ನೆರವನ್ನು ಕೋರಿ ಮೆಮೋರಾಂಡಮ್ ಸಲ್ಲಿಸಲಾಗಿದೆ ಕೇಂದ್ರ ಅಧ್ಯಯನ ತಂಡವು ರಾಜ್ಯಕ್ಕೆ ಸದ್ಯದಲ್ಲಿಯೇ ಭೇಟಿ ನೀಡುವ ನೀರಿಕ್ಷೆಯಲ್ಲಿದೆ.

ಈ) ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೆ ರೂ.69 87 ಕೋಟಿ ಅನುದಾನ ಬಿಡುಗಡೆ ಮಾಡಿದೆ.

ಉ) ರಾಜ್ಯ ಸರ್ಕಾರ ಸರ್ವ ಪಕ್ಷಗಳ ನಿಯೋಗವನ್ನು ಕೇಂದ್ರಕ್ಕೆ ಕಳುಹಿಸಿ ಕೊಡುವ ಬಗ್ಗೆ ಯಾವುದೇ ತೀರ್ಮಾನ ಕೈಗೊಂಡಿರುವುದಿಲ್ಲ.

ಅನುಬಂಧ – 1

2013–14ನೇ ಸಾಲಿನಲ್ಲಿ ಅತಿವೃಷ್ಟಿಯಿಂದ ಹಾನಿಯಾದ ವಿವರಗಳು

Rs in Lakhs

ಕ್ರ.ಸಂ	ಜಿಲ್ಲೆ	ಮಾನವ ಜೀವ ಹಾನಿ	ಜಾನುವಾರು ಹಾನಿ	ಮನೆ ಹಾನಿ (ಸಂ)	ಮನೆ ನಷ್ಟ ಮೊತ್ತ	ಮೂಲಭೂತ ಸೌಕರ್ಯ ಹಾನಿ	ಒಟ್ಟು ಹಾನಿ
1	ಬೆಂಗಳೂರು ನ					0	0.00
2	ಬೆಂಗಳೂರು ಗ್ರಾ	5		158	94.39	21 11	115.50
3	ಬಾಗಲಕೋಟೆ		3	856	998 42	0	998 42
4	ಬೆಳಗಾವಿ	14	7	1189	498.35	6888 05	7386 40
5	ಬಿಜಾಪುರ	1				155.15	155.15
6	ಬೀದರ್	5				0.00	0 00
7	ಬಳ್ಳಾರಿ	1	65	431	208.16	0 00	208 16

8	ಚಾಮರಾಜನಗರ	1		263	23 67	295.08	318.75
9	ಚಿತ್ರದುರ್ಗ	2	48	1083	460.29	0 00	460.29
10	ಚಿಕ್ಕಬಳ್ಳಾಪುರ	7				7998.30	7998.30
11	ಚಿಕ್ಕಮಂಗಳೂರು	5	15	398	238.39	414.99	653 38
12	ದಕ್ಷಿಣ ಕನ್ನಡ	18	16	909	444.44	3714.49	4158.93
13	ಧಾರವಾಡ	9	2	1155	489.00	2016.00	2505.00
14	ದಾವಣಗೆರೆ	2	26	735	336 76	537 19	873 95
15	ಗದಗ್	1	4	2344	1008 40	103 04	1111 44
16	ಗುಲ್ಬರ್ಗ	10	25			0.00	0.00
17	ಹಾಸನ	1				0.00	0.00
18	ಹಾವೇರಿ	5	28	1739	746 85	19 16	766 01
19	ಕೊಪ್ಪಳ	6				4271.25	4271 25

20	ಕೊಡಗು	1	16	691	410.21	0 00	410 21
21	ಕೋಲಾರ	3				0 00	0 00
22	ಮೈಸೂರು	1			275 06	0 00	275 06
23	ಮಂಡ್ಯ	3				504 10	504 10
24	ರಾಮನಗರ	4				3913 31	3913 31
25	ರಾಯಚೂರು			129	50.36	0 00	50 36
26	ಶಿವಮೊಗ್ಗ	3	5	1628	968.66	5279 32	6247.98
27	ತುಮಕೂರು	3	1	843	365.95	103 27	469 22
28	ಉತ್ತರ ಕನ್ನಡ	2	8	320	152 74	2045 35	2198 09
29	ಉಡುಪಿ	6	6	455	439 05	4284 65	4723 70
30	ಯಾದಗಿರಿ					0.00	0 00
	Total	**119**	**286**	**15990**	**8209 1532**	**42563 81**	**50772 96**

ಅನುಬಂಧ-1



Details of Agriculture Crops Affected due to Excess Rainfall/Floods during Kharif 2013-14

	Crop (Area in Hectares)																
	Paddy	Jowar	Ragi	Maize	Tur	Black Gram	Green Gram	Cowpea/Avare	Groundnut	Sesamum/Gurellu	Sunflower	Soyabean	Cotton	Sugarcane	Tobacco	Others	Total Area Affected in Ha
Crop Loss occurred up to August 2013																	
Belgaum	2045				937	272	367	2735	175	695			19693	3	22739		49259
Bagalkot	788			2452				591	1281			64	1266	25			4695
Bijapur	6344			10552				30					751				5285
Dharwad	2591																2591
Gadag	72																72
Haveri	67																67
Bellary			6	2856									451				2063
Crop Loss Occurred during September 2013																	
								1				172					173

Sl No	District	Potato	Tomato	Onion	Chilli	Peas	Gourds	Banana	Other vegetables	Ginger	Tuberose	Marigold	Total (in Ha)
								2	40				42
									57	1106			6125
									0 43				0 43
			55	5	307				081	120	639		10193
									0 74				0 74
									401	30	231	5	506
													0
									50	50	200		300
			3 51						7 50	0 00			18 84
				120	3 6				4 62	6		3	145 62
			5		5				2	2			24
	Total	8390	70 5	4487	443 8	74	0 32	1283 95	214 04	2378	5	3	17355 63
	Cost of cultivation Rs												
	Total loss Rs in lakhs	4856 92	6 16	3181 08	312 17	51 60	3 17	2332 10	0 00	1059 67	8 38	2 05	14971 65

Rs 149 71 crores

Details of Horticulture Crops affected due to floods during 2013-14

Sl No	District	Coconut	Arecanut (in ha)	Arecanut (other than at falls)	Pepper	Cocoa	Cashew	Cardamum	Mango	Guava	Rubber	Oilpalm	Rose	Chrysanthemum	Total (in ha)
									5						60
					653			1432							2242
					307	0 2	0 10								26541 75
					229			535							24357
							16 5				2 4				263 91
															21815
															2302
					30										6054
									24				5 81	12 75	42 56
										8 2					8 2
												2			2
	Total	1	85 06	3 76	8210 07	0 2	17 04	1967	29	8 2	2 4	2	5 81	12 75	98658 42
	Cost of cultivation Rs								66856	71915	75000	58810	263000	123000	
	Total loss Rs in lakhs	3 8	4803 25	8 69	6558 53	0 32	9 18	0 00	19 39	5 90	1 80	1 18	15 28	15 68	163873 58

Rs 1638 73 crores

NDRF / SDRF released to DCs & HODs for Relief Works during 2013-14
(As on 22.11.2013)

Sl No	District	Drought	Flood	Input Subsidy	Equipments	Total (Rs in Lakhs)
1	Bangalore Urban	80.00	510.00			590.00
2	Bangalore Rural	80.00	10.00			90.00
3	Bagalkote	190.00	120.00			310.00
4	Belgaum	390.00	220.00		160.00	770.00
5	Bellary	280.00	96.00			286.00
6	Bidar	130.00	10.00			140.00
7	Bijapur	110.00	210.00			320.00
8	Chamarajanagar	860.00	60.00			920.00
9	Chikkamagalur	110.00	820.00	1770.00		2700.00
10	Chitradurga	190.00	120.00			310.00
11	Dakshina Kannada	240.00	20.00			260.00
12	Davanagere	50.00	510.00	2000.00		2560.00
13	Dharwad	130.00	270.00			400.00
14	Gadag	140.00	10.00			150.00
15	Gulbarga	130.00	10.00			140.00
16	Hassan	180.00	170.00			350.00
17	Haveri	200.00	320.00			520.00
18	Kodagu	150.00	120.00			270.00
19	Kolar	60.00	510.00	130.00		700.00
20	Koppal	120.00	60.00			180.00
21	Mandya	110.00	10.00			120.00
22	Mysore	240.00	120.00			360.00
23	Raichur	290.00	120.00			410.00
24	Shimoga	110.00	210.00			320.00
25	Tumkur	130.00	60.00			190.00
26	Udupi	180.00	570.00	1550.00		2270.00
27	Uttara Kannada	1280.00	20.00			1300.00
28	Yadgir	30.00	360.00	650.00	5.61	1115.61
29	Ballari (Bellary)	170.00	720.00	300.00		1190.00
30	Vijayapura	120.00	10.00		12.00	142.00
31	Resident Commissioner, New Delhi		16.00			16.00
32	Nodal Officer, SDRF	566.00	-			566.00
33	Nodal Officer, Uttarakhand		15.00			15.00
	Total	7266.00	6167.00	6100.00	177.61	20010.61

Annexure 3

Details of relief paid to the victims in the flood affected areas

Rs in Lakhs

Sl no	District	Human casualties		Cattle casualties		Crop loss	House damages			Infrastructure damages		Other Relief items	Total relief paid
		Nos	Amount paid	Nos	Amount paid	Amount paid	No of Houses damaged	No of Houses Paid	Amount paid	Sanction	Amount released for restoration works		
1	Bagalkot						656					0.00	0.00
2	Belagavi (Belgaum)	5	7.50	4			1.00						7.50
3	Bengaluru (Urban)						0						0.00
4	Bellary	20	30	7	0.07		1.00	410	5.20	900	25	30	210.50
5	Belgaum		1.50	2	0.03		431	217	2.74	25.55	16		20.30
6	Bidar	3	7.50				0			214	165		172.50
	Ballari		5				0						1.50
8	Chamarajanagar	1		1	0.38		203			36.35	18.17	1.06	21.11
9	Chikkaballapura	2	3				0						3.00
10	Chikkamagaluru	2	2.5		0.35	9.00	3.00	2.27	8.03	4.05	2.0	0.21	669.9
11	Chitradurga	5	7.5	2	0.2		1062	610	12.20	100	10	1.35	25.50
12	Dakshina Kannada	18	27	3	1.03	8.00	4.00	735	27.75	150.0	13	4.96	97.28
13	Davanagere	9	13.5	10	1.4		7.35	4.00	13.27	42.65	31.99	1.25	61.91
14	Dharwad	2	3				1153	1035	23.50	80	60	0.79	85.09
15	Gadag		0	56	4.05		234.	153.0	30.06	119.51	1.76		109.21
16	Gulbarga	10	5				0						5.00
17	Hassan	0	0				0			320	224		225.50
18	Haveri	5	7.5	1	0.73		173.0	7.00	21.96			1.52	31.71
19	Kodagu	6	9	15	1.05		691	234	9.56	118.39	84.17	35.28	142.78
20	Kolar	1	1				0						1.50
21	Koppal	3	4.5				0			230	115		119.50
22	Mandya	1	1				0						1.50
23	Mysuru	3	4.5	9	0.63		66.0	65	5.31			6.57	17.27
24	Raichur		0				14.0	56	1.03			36	8.39
25	Ramanagara		0				0						0.00
26	Shivamogga	2	3.5	2	0.28	2.00	1028.	205.	13.02	400	230	3.2	1357.3
27	Tumakuru	3	5	3			84.0	129	6.74				11.24
28	Udupi	2	3	3	0.14	2.00	45.5	321	3.64	385	87.41	4.8	99.29
29	Uttara Kannada	6	9	9	2.5	7.39	5.0	257	7.62	353	259		415.57
30	Vijayapura						0					1.2	1.20
31	Yadgir												
Total		119	178.5	316	19.18	3135	15990	7332	197.30	3252.95	1681.04	137.18	5352.20

Details of Agriculture Crops affected due to DRY SPELL during Kharif 2013-14

STATE: KARNATAKA

Sl. No. DISTRICT	Crop (Area in Hectares)																Total area affected in Ha
	Mainted Paddy	Jowar	Ragi	Bajra/ Jowar Millets	Maize	Tur	Black gram	Green gram	Cowpea/ Avare	Groundnut	Sesamum/ Castor/ Niger	Sunflower	Soyabean	Cotton	Sugarcane	Others	
[illegible]		304			17090	116-7	2306		25793	n	1619	253	6540	0	30	0		65764
[illegible]	17	[illegible]			[illegible]	[illegible]			00364	199	24006	305	4990		[illegible]4106			137471
[illegible]		[illegible]			[illegible]	[illegible]			[illegible]	4408	09	1631	653		135			23095
[illegible]	21	4[illegible]			[illegible]	[illegible]			1-52		4737		912	4557	4862	132 0		77088
[illegible]		2355	[illegible]		[illegible]	[illegible]			1931	5116	1554	871	550		828			16677
[illegible]		[illegible]	[illegible]		[illegible]	3013			241	1000	55922	173	7182	10	4341			105429
[illegible]		[illegible]	[illegible]		[illegible]	[illegible]			[illegible]	[illegible]	4421	658	215					89404
[illegible]	[illegible]								10-10		4570			6010	9700			59408
[illegible]		42 [illegible]	[illegible]	65[illegible]	[illegible]	[illegible]		[illegible]	2490	1315	1200	1168	758		980	0-2		49157
[illegible]	[illegible]		[illegible]		[illegible]	[illegible]				1331	5745		[illegible]					24461
[illegible]			[illegible]		[illegible]	[illegible]					1463							23748
[illegible]			[illegible]		[illegible]	[illegible]				810	1003	239	[illegible]			1915		22926
[illegible]			[illegible]		[illegible]	[illegible]				5	[illegible]	160	670		150			3270
[illegible]					[illegible]						1560		150		1260			5580
[illegible]					[illegible]	[illegible]					66		277		1250			3168
Total Area	[illegible]	19224	[illegible]8121	26748	1132[illegible]	15935	8277	140[illegible]	17672	17062	5656	22894	10477	37672	16117	0		706651
[illegible]	[illegible]	58[illegible]	27265[illegible]	25165	[illegible]	[illegible]	[illegible]	[illegible]	[illegible]	[illegible]	[illegible]	17500	21418	35188	[illegible]47373	6344		
Estimated loss @ 50% cost of Cultivation of crops in (Rs. in Lakhs)	8329 40	2486 62	10562 81	3365 32	16968 70	2157 25	615 23	14146 44	1783 72	24802 84	495 08	2451 72	1860 92	8923 18	6723 53	0 00	1016 99	

Total estimated loss - Rs. 1016 99 crores

Annexure- (Annuals) 3

Details of Horticulture Crops affected due to heavy rains during 2013-14 (In ha.)

Sl No	District	Tomato	Onion	Beans	Cabbage	Banana	Other vegetables	Turmeric	Flowers	Total (In Ha)
1	Tumkur					181	766		1100	2047
2	Gulbarga		2 8			12 94				14 74
3	Chamarajnagar	13		2	2	34		18		69
4	Hassan									0
5	Kolar									0
6	Mandya						111 2			111.2
7	Ramanagar						436			436
8	Chikmagalur						56			56
9	Chitradurga	2	119 07			56 08	0 6			177 75
10	Mysore						532			532
11	Bangalore Rural									0
12	Chikballapur									0
		15	120 87	2	2	284 02	1901 8	18	1100	3443 69
	Cost of cultivation Rs/ha	91000	70895	70000	50000	181635		128574	167500	
	Estimated loss @ 50% cost of cultivation	0 0014	0 0086	0 0001	0 0001	0 0516	0 0000	0 0023	0 1843	0 2483

Annexure- 3(Perrenials)

Details of Horticulture Crops affected due to drought during 2013-14

Sl No	District	Coconut	Arecanut (nut fall)	Betelvine	Cocoa	Mango	Sapota	Lime	Pomogra nate	Papaya	Total (in ha)
1	Tumkur	41316	9696	10	8	772	30	0 1	17	2	50851 1
2	Gulberga										0
3	Chamarajnagar	7493									7493
4	Hassan	50300									50300
5	Kolar	93									93
6	Mandya	6933									6933
7	Ramanagar	13265									13265
8	Chikmagalur	26119									26119
9	Chitradurga	4761	4 69	1 8						5 3	4792 79
10	Mysore	14960									14960
11	Banga'ore Rura	57									57
12	Chikballapur	33									33
	Total	165350	8700 69	11 8	8	772	30	0 1	17	7 3	174896 9
Cost of cultivation Rs/ha		75 000	181804	48600	162453	66856	66950	70000	72569	195680	
Estimated loss @ 50% cost of cultivation rs in crores		620 06	79 09	0 03	0 06	2 58	0 10	0 00	0 06	0 07	702 06

Rs in crores 702 06

ಡಾ:ಗುರುಪಾದಪ್ಪ ನಾಗಮಾರಪಳ್ಳಿ: ಅತಿವೃಷ್ಟಿ, ಅನಾವೃಷ್ಟಿ ಹಾನಿಯಾಗಿ 1.719 ಕೋಟಿ ರೂ ಲುಕ್ಸಾನಾಗಿದೆ ಎಂದು ಹೇಳಿದ್ದೀರಿ. ಕೇಂದ್ರ ಸರ್ಕಾರಕ್ಕೆ 1015.15 ಕೋಟಿ.ರೂ ಆರ್ಥಿಕ ನೆರವು ಕೋರಿ memorandum ಸಲ್ಲಿಸಲಾಗಿದೆ ಎಂದು ಹೇಳಿದ್ದಾರೆ

ಅಧ್ಯಕ್ಷರು : ಹೇಗೂ ಇದು ಚರ್ಚೆಗೆ ಬರುತ್ತಿದೆಯಲ್ಲ ಆ ಸಂದರ್ಭ ದಲ್ಲಿ ನೀವು ಭಾಗವಹಿಸಿ ಮಾತನಾಡಿದರೆ ಒಳ್ಳೆಯದು.

ಡಾ:ಗುರುಪಾದಪ್ಪ ನಾಗಮಾರಪ್ಪಳ್ಳಿ: ನಾನು simple question ಕೇಳಿ ಮುಗಿಸುತ್ತೇನೆ. 69 ಕೋಟಿ.ರೂ. ಮಾತ್ರ ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ, ಜಾಸ್ತಿ ಹಣ ಕೊಟ್ಟಿಲ್ಲ. ಮೊದಲು 1700 ಕೋಟಿ, ರೂ. ಖರ್ಚಾಗಿ ಲುಕ್ಸಾನಾ ಗಿದೆ. 1014 ಕೋಟಿ. ರೂ. ಕೇಳಿದ್ದೀರಿ. ಅದರಲ್ಲಿ 69 ಕೋಟಿ. ರೂ. ಕೊಟ್ಟಿ ದ್ದಾರೆ. ಇವತ್ತಿನವರೆಗೂ ಕೇಂದ್ರ ಸರ್ಕಾರದ ಹಣ ಬಂದಿಲ್ಲ. ಕೇಂದ್ರಕ್ಕೆ ನಿಯೋಗ ಕಳುಹಿಸುತ್ತೀರಾ ಎಂದು ಕೇಳಿದ್ದಕ್ಕೆ ನಿಯೋಗ ಕಳುಹಿಸಿಕೊಡುವ ಬಗ್ಗೆ ಯಾವುದೇ ತೀರ್ಮಾನ ಕೈಗೊಂಡಿರುವುದಿಲ್ಲವೆಂದು ಹೇಳಿದ್ದೀರಿ. Opposition, ಸರ್ಕಾರದವರು ಕೂಡಿ ನಿಯೋಗ ಹೋಗಿ ಪ್ರಯತ್ನ ಮಾಡಿ ದರೆ, ಎಲ್ಲ ಲುಕ್ಸಾನಾಗಿರುವುದಕ್ಕೆ ಏನಾದರೂ ಪ್ರಯತ್ನ ಪರಿಹಾರ ಸಿಗಬಹು ದಲ್ಲ? ಏಕೆ ಕಳುಹಿಸುವುದಿಲ್ಲವೆಂದು ಹೇಳುತ್ತೀರಿ? ಕಳುಹಿಸಿ. ಬೀದರ್ ಜಿಲ್ಲೆಯಲ್ಲಿ ಬಹಳ ಮಳೆ ಬಂದು ತೊಗರಿ ಪೂರ್ತಿ ಹೋಗುತ್ತಿದೆ.

ಅಧ್ಯಕ್ಷರು : ನೇರವಾಗಿ ಪ್ರಶ್ನೆ ಕೇಳುತ್ತಿಲ್ಲ. ಪ್ರಶ್ನೆ ಕೇಳಿ. ಪ್ರಶ್ನೆಯಲ್ಲಿ ನೀವು ಕೇಳುತ್ತಿರುವುದು

ಡಾ:ಗುರುಪಾದಪ್ಪ ನಾಗಮಾರಪಳ್ಳಿ : ಮೊನ್ನೆ ಮಳೆ ಬಂದು ಪೂರ್ತಿ ತೊಗರಿ, ಉದ್ದು, ಹೆಸರು ಎಲ್ಲ ಹೊರಟುಹೋಗಿದೆ ಅದರ ಬಗ್ಗೆ ಏನಾದರೂ ಪರಿಶೀಲನೆ ಮಾಡಿ.

ಅಧ್ಯಕ್ಷರು : ಅದಕ್ಕೇನಾದರೂ ಪರಿಹಾರ ಕೊಡುತ್ತೀರಾ ಎಂದು ಕೇಳಿ.

ಡಾ.ಗುರುಪಾದಪ್ಪ ನಾಗಮಾರಪಳ್ಳಿ : ಅದಕ್ಕೇನಾದರೂ ಪರಿಹಾರ ಕೊಡುತ್ತೀರಾ? ಕೇಂದ್ರ ಸರ್ಕಾರಕ್ಕೆ ನಿಯೋಗ ಕಳುಹಿಸುತ್ತೀರಾ?

ಶ್ರೀ ವಿ.ಶ್ರೀನಿವಾಸ ಪ್ರಸಾದ್ : 6 ತಿಂಗಳ ಹಿಂದೆ ನಮ್ಮ ಸರ್ಕಾರ ಬಂದ ಮೇಲೆ ಬಹಳಷ್ಟು ಸಾರಿ ಸದನದಲ್ಲಿ ಹೇಳಿದ್ದೇನೆ. ನಾವು ಮೇ ತಿಂಗಳಲ್ಲಿ ಅಧಿಕಾರಕ್ಕೆ ಬಂದ ತಕ್ಷಣ ಮೇ ತಿಂಗಳ ಕೊನೆಯ ಭಾಗದಲ್ಲಿ ನಮಗೆ ಅನಾವೃಷ್ಟಿ ಇತ್ತು ಬಹಳ ಬರ ಇತ್ತು. ಆಗ ಸನ್ಮಾನ್ಯ ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತಿಯ ಕಾರ್ಯನಿರ್ವಹಣಾ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡಿ, ಬಹಳ ಬರ ಇರುವುದನ್ನು ಯಾವ ರೀತಿ ಎದುರಿಸಬೇಕು ಎನ್ನು ವುದರ ಬಗ್ಗೆ ಸಿದ್ಧತೆ ಮಾಡಿಕೊಳ್ಳುವುದಕ್ಕೋಸ್ಕರ ನಾವೆಲ್ಲರೂ ಸುದೀರ್ಘವಾಗಿ ಚರ್ಚೆ ಮಾಡಿ ಅದರಲ್ಲಿ ಮುಖ್ಯವಾಗಿ ಬರ ಪರಿಸ್ಥಿತಿಯನ್ನು ಎದುರುಸುವು ದರಲ್ಲಿ ಕುಡಿಯುವ ನೀರು, ಗೋಶಾಲೆಗಳು. ಕೈಗೆ ಕೆಲಸ ಕೊಡಬೇಕೆನ್ನುವ ರೀತಿಯಲ್ಲಿ ಅವರಿಗೆ ಆ ರೀತಿಯಾದ ಕಾರ್ಯಕ್ರಮಗಳನ್ನು ಮಾಡಿಸಬೇಕು, ಅದಕ್ಕೆ action plan ಇತ್ಯಾದಿ ಎಲ್ಲ ಮಾಡಬೇಕೆನ್ನುವುದಕ್ಕೆ ಯಾವುದೇ ಹಣದ ಕೊರತೆ ಇರಬಾರದು ಎಂದು ಮಾಡಿದೆವು. ಆಗ ಅನಾವೃಷ್ಟಿ ಇತ್ತು. ಅದಾದ ನಂತರ ಅತಿವೃಷ್ಟಿಯಾಯಿತು. 6 ಜಿಲ್ಲೆಗಳಲ್ಲಿ ಕೂಡ ವಿಪರೀತವಾಗಿ ಮಳೆ ಬಂದು ಪ್ರವಾಹ ಕೂಡ ಬಂತು. ಅತಿವೃಷ್ಟಿ, ಅನಾವೃಷ್ಟಿ ಎರಡನ್ನೂ ಕೂಡ ನಾವು ಎದುರುಸಿದ್ದೇವೆ, ಅನಾವೃಷ್ಟಿ ಎರಡನ್ನೂ ಕೂಡ ನಾವು ಎದುರಿಸಿದ್ದೇವೆ. ಅನಾವೃಷ್ಟಿ ಅತಿವೃಷ್ಟಿ ಆದಂಥ ಸಮಯದಲ್ಲೂ ನಾವು ಬಹಳಷ್ಟು ಚರ್ಚೆ ಮಾಡಿ ಅದರ ಬಗ್ಗೆ ನಾನು video conference ಅನ್ನು ಮಾಡಿ ಎಲ್ಲ ಜಿಲ್ಲಾ ಧಿಕಾರಿಗಳ ಜೊತೆ ಸಂಪರ್ಕ ಮಾಡಿ, ಸಭೆಗಳನ್ನೂ ಕೂಡ ಮಾಡಿ ಅನಾವೃಷ್ಟಿ ಯಲ್ಲೂ ಕೂಡ ನಾವು ಸ್ಪಂದಿಸಿದ್ದೇವೆ. ಹಣಕಾಸಿನ ತೊಂದರೆಯಾಗದ ರೀತಿಯಲ್ಲಿ ಎಲ್ಲಾ ರೀತಿಯಾದ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಅದಾದ ಮೇಲೆ ಕೇಂದ್ರ ಸರ್ಕಾರಕ್ಕೆ ಅನಾವೃಷ್ಟಿಯಲ್ಲಿ ಆಗಿರುವುದರ ಬಗ್ಗೆ ಅವರಿಗೆ memorandum ಕೂಡ ಕೊಟ್ಟಿದ್ದೇವೆ. ಇಷ್ಟು ಕೊಟ್ಟಿದ್ದೇವೆ. ಇಷ್ಟು ನಷ್ಟವಾಗಿದೆ ಎಂದು. ಅಲ್ಲಿಂದ ಒಂದು ಕಮಿಟಿ ಕೂಡ ಬಂದಿತ್ತು. ಅವರು 6 ಜಿಲ್ಲೆಗಳಲ್ಲಿ

ಕೂಡ ಪ್ರವಾಸ ಮಾಡಿದ್ದಾರೆ. ಸ್ವತಃ ಮುಖ್ಯಮಂತ್ರಿಯವರು ಮತ್ತು ನಾನು ಕೂಡ ಸಮಿತಿಯ ಜೊತೆಯಲ್ಲಿ ಹೋಗಿ ಅವರಿಗೆ ನಾವು brief ಮಾಡಿ, ಸಂಕ್ಷೀಪ್ತವಾಗಿ ವಿಚಾರವನ್ನು ತಿಳಿಸಿ ಹೇಳಿದ್ದೇವೆ. ಇನ್ನೂ ಕೂಡ ಹಣ ಬಿಡುಗಡೆಯಾಗಬೇಕಾಗಿದೆ. ಬರ ಪರಿಸ್ಥಿತಿಯ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವಿಯನ್ನೂ ಕೂಡ ಕೊಟ್ಟಿದ್ದೇವೆ. ಎಷ್ಟು ನಷ್ಟವಾಗಿದೆ ಎಂದು ಅಂದಾಜು ಮಾಡಿ ಕೊಟ್ಟಿದ್ದೇವೆ. ಆ ಟೀಂ ಈಗ ಬರಬೇಕಾಗಿದೆ. ನಾವೂ ಕೂಡ ಅವರಿಗೆ ಮನವಿ ಮಾಡಿದ್ದೇವೆ, ಅವರು ಬರುತ್ತಾರೆ. ಎಲ್ಲೆಲ್ಲಿ ತೀವ್ರವಾಗಿ ಬರಪೀಡಿತ ವಾಗಿದೆ, ಸಂಕಷ್ಟಕ್ಕೆ ಸಿಲುಕಿರುವ ಪ್ರದೇಶಗಳಿಗೆ ಕೂಡ ಭೇಟಿ ಕೊಟ್ಟು ಪರಿಶೀಲಿಸಿ, ಸೂಕ್ತವಾದ ಪರಿಹಾರವನ್ನು ಕೆಂದ್ರ ಸರ್ಕಾರ ಅವರ norms ಪ್ರಕಾರ ಕೊಡಬೇಕೆನ್ನುವುದನ್ನೂ ಕೂಡ ನಾವು ಅವರಿಗೆ ಮನವಿ ಮಾಡಿದ್ದೇವೆ. ತಾವು ಇವತ್ತು ತೊಗರಿ ಬೇಳೆ, ಇತ್ಯಾದಿ ಬೆಳೆಗಳು ತುಂಬಾ ನಷ್ಟವಾಗಿದೆ, ನಮಗೆ ಪರಿಹಾರ ಕೊಡಬೇಕೆಂದು ಕೇಳಿದ್ದೀರಿ. Cabinet ಉಪ ಸಮಿತಿ ಮುಂದಿಟ್ಟು ಚರ್ಚೆ ಮಾಡಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಸಾಧ್ಯ ವಾದಷ್ಟೂ ಕೂಡ ಅವರಿಗೆ ಪರಿಹಾರ ಕೊಡುವ ರೀತಿಯಲ್ಲಿ ಪ್ರಯತ್ನ ಮಾಡು ತ್ತೇವೆ.

ಶ್ರೀ ಗುರುಮಾದಪ್ಪ ನಾಗಮಾರಪಳ್ಳಿ : ಬೆಳೆ ವಿಮೆಯ ಬಗ್ಗೆ ಏನು ಮಾಡಿದ್ದೀರಿ?

ಅಧ್ಯಕ್ಷರು : ಬೆಳೆಯ ವಿಮೆಯ ಬಗ್ಗೆ ಕೇಳುತ್ತಿದ್ದಾರೆ.

ಶ್ರೀ ಎ. ಶ್ರೀನಿವಾಸ ಪ್ರಸಾದ್: ಬೆಳೆಯ ವಿಮೆಯ ವಿಚಾರ ಕೃಷಿ ಸಚಿವರಿಗೆ ಬರುತ್ತದೆ.

ಶ್ರೀ ಈಶ್ವರ ಖಂಡ್ರೆ : ಮಾನ್ಯ ಕಂದಾಯ ಸಚಿವರು ಏನು ಉತ್ತರ ಕೊಟ್ಟಿದ್ದಾರೆ, ಅದರಲ್ಲಿ ನಮ್ಮ ಬೀದರ್ ಜಿಲ್ಲೆಯಲ್ಲಿ 20 ಸಾವಿರ ಹೆಕ್ಟೇರ್ ಭೂಮಿಯಲ್ಲಿ ಬೆಳೆ ನಷ್ಟವಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. 20 ಸಾವಿರ ಹೆಕ್ಟೇರ್ ಭೂಮಿಯಲ್ಲಿ ಬೆಳೆ ನಷ್ಟವಾದರೂ ಇಲ್ಲಿಯವರೆಗೆ ನಮ್ಮ ಜಿಲ್ಲೆಗೆ ಒಂದು ನಯಾ ಪೈಸೆ ಹಣ ಬಿಡುಗಡೆಯಾಗಿಲ್ಲ. ಬೇರೆ ಬೇರೆ ಜಿಲ್ಲೆಗಳಿಗೆ ಹಣ

ಬಿಡುಗಡೆಯಾಗಿದೆ. ಬೀದರ್ ಜಿಲ್ಲೆಗೆ ಹಣ ಬಿಡುಗಡೆಯಾಗಲೂ ಏಕೆ ವಿಳಂಬ ವಾಗಿದೆ? ವರದಿ ಬರುವುದು ಏನಾದರೂ ತಡವಾಗಿದೆಯೆ? ಏಕೆ ನಮಗೆ ಪರಿಹಾರ ಸಿಕ್ಕಿಲ್ಲವೆಂದು ಕೇಳಲಿಕ್ಕೆ ಬಯಸುತ್ತೇನೆ ಮತ್ತು ತಕ್ಷಣ ನಮ್ಮ ಜಿಲ್ಲೆಗ ಪರಿಹಾರ ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ನಾವು ಎಲ್ಲಾ ಜಿಲ್ಲೆಗಳಿಗೂ ಪರಿಹಾರ ಕೊಟ್ಟಿದ್ದೇವೆ. ಬೀದರ್ ಜಿಲ್ಲೆ ಏಕೆ ಬಿಟ್ಟಿದ್ದೇವೆಂದು ಗೊತ್ತಾಗುತ್ತಿಲ್ಲ, ಆ ಬಗ್ಗೆ ನಾನು ಪರಿಶೀಲಿಸುತ್ತೇನೆ.

ಶ್ರೀ ಈಶ್ವರ ಖಂಡ್ರೆ : ನಮ್ಮ ಬೀದರ್ ಜಿಲ್ಲೆಗೆ ಬೆಳೆ ನಷ್ಟವಾಗಿರುವುದಕ್ಕೆ ಒಂದು ನಯಾ ಪೈಸೆಯೂ ಸಿಗಲಿಲ್ಲ.

ಅಧ್ಯಕ್ಷರು : ಆ ಬಗ್ಗೆ ಪರಿಶೀಲಿಸುತ್ತೇನೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ, ಸಾಕು ಬಿಡಿ.

ಶ್ರೀ ಕಾಶಪ್ಪನವರ್ ವಿಜಯಾನಂದ್ ಶಿವಶಂಕರಪ್ಪ : ನಮ್ಮ ಹುನು ಗುಂದ ತಾಲ್ಲೂಕಿನಲ್ಲಿಯೂ ಕೂಡ ಅತಿವೃಷ್ಟಿಯಿಂದಾಗಿ ಸುಮಾರು ಭೂಮಿ ಮುಳುಗಡೆಯಾಗಿದೆ. ಇಲ್ಲಿಯೂ ಕೂಡ ಪರಿಹಾರ ಕೊಟ್ಟಿಲ್ಲ. ಹೀಗಾಗಿ ನಾನು ಮಾನ್ಯ, ಕಂದಾಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ಇಳಕಲ್ ನಗರ ತಾಲ್ಲೂಕು ಕೇಂದ್ರವನ್ನಾಗಿ ಮಾಡುವುದಕ್ಕೆ ಈಗಾಗಲೇ ಸಾಕಷ್ಟು ಒತ್ತಾಯ ಇದೆ.

ಅಧ್ಯಕ್ಷರು : ಪರಿಹಾರದ ಬಗ್ಗೆ ಕೇಳಿ. ಬೇರೆ ವಿಚಾರ ಹೇಳಬೇಡಿ.

ಶ್ರೀ ಕಾಶಪ್ಪನವರ್ ವಿಜಯಾನಂದ್ ಶಿವಶಂಕರಪ್ಪ : ಆ ಪ್ರಶ್ನೆಯೂ ಇದೆ, ಹೀಗಾಗಿ ಆ ಬಗ್ಗೆಯೂ ನಾನು ಕೇಳುತ್ತೇನೆ. ಇಳಕಲ್ ನಗರವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡುವ ವಿಚಾರದ ಬಗ್ಗೆ ಹೇಳಬೇಕಾಗುತ್ತದೆ.

ಅಧ್ಯಕ್ಷರು : ಎಲ್ಲಾ ಮಿಕ್ಸ್ ಮಾಡಬೇಡಿ. ಈಗ ಏನು ಪ್ರಶ್ನೆ ಇದೆ ಅಷ್ಟಕ್ಕೆ ಸೀಮಿತಗೊಳಿಸಿ.

ಶ್ರೀ ವಿ ಶ್ರೀನಿವಾಸ ಪ್ರಸಾದ್ : ಪರಿಹಾರದ ಬಗ್ಗೆ ನಾನು ನೋಡುತ್ತೇನೆ.

ಶ್ರೀ ಹೆಚ್ ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಈಗ ಬರಗಾಲದ ಬಗ್ಗೆ ಮಾನ್ಯ ಮಂತ್ರಿಗಳು ಜಿಲ್ಲಾಧಿಕಾರಿಗಳಿಂದ ವರದಿ ತರಿಸಿ ಮಾಡಿದ್ದೇವೆಂದು ಹೇಳಿದರು. ಜಿಲ್ಲಾಧಿಕಾರಿಗಳ ವರದಿಯನ್ನು ಡಬ್ಬಿಗೆ ಎಸೆದಿದ್ದಾರೆ. ತಾವು ಬೇಕಾದರೆ ಓದಿ ಹೇಳಿ ಎಂದರೆ ಓದುತ್ತೇನೆ.

ಅಧ್ಯಕ್ಷರು : ಅದು ಬೇಡ. ನಿಮಗೆ ಏನು ಆಗಬೇಕೆಂದು ಹೇಳಿ.

ಶ್ರೀ ಹೆಚ್ ಡಿ.ರೇವಣ್ಣ : ಇಲ್ಲಿ ಮಾನ್ಯ ಸಭಾನಾಯಕರು ಇದ್ದಾರೆ. ಹಾಸನ ಜಿಲ್ಲೆಯಲ್ಲಿ ಅರಸೀಕೆರೆ, ಚನ್ನರಾಯಪಟ್ಟಣ ನನ್ನ ಕ್ಷೇತ್ರದ ಎರಡು ತಾಲ್ಲೂಕುಗಳು ದುದ್ದ ಮತ್ತು ಶಾಂತಿಗ್ರಾಮ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕಿನ ಜನ್ನೇನುಹಳ್ಳಿ ಬಗ್ಗೆ ಜಿಲ್ಲಾಧಿಕಾರಿಗಳು ವರದಿ ಕಳುಹಿಸಿದ್ದು, ಖುದ್ದಾಗಿ ಜಂಟಿ ನಿರ್ದೇಶಕರೇ ಬರಗಾಲವೆಂದು ಘೋಷಿಸಬೇಕೆಂದು ವರದಿ ಕಳುಹಿಸಿದ್ದರೂ ಅಲ್ಲಿ ಬಿಟ್ಟು ಬೇರೆ ಕಡೆ ಮಾಡಿದರು ಅರಕಲಗೂಡು ಮಾಡಿ, ಹೊಳೆನರಸೀಪುರದಲ್ಲಿ ಹಳ್ಳಿ ಮೈಸೂರು ಇದೆ ಅಲ್ಲಿಯೂ ಮಾಡಿ ಎಂದು ನಾನು ಮನವಿ ಮಾಡಿತ್ತಿದ್ದೇನೆ. ದಯಮಾಡಿ ಜಿಲ್ಲಾಧಿಕಾರಿಗಳ ವರದಿ ಏನು ಇದೆ ಅದನ್ನು ಮಾನ್ಯ ಕಂದಾಯ ಮಂತ್ರಿಗಳು ನೋಡಬೇಕು. ಏಕೆಂದರೆ, ವರದಿ ತೆಗೆದುಕೊಂಡು ಬುಟ್ಟಿಗೆ ಎಸೆದಿದ್ದಾರೆ.

ಅಧ್ಯಕ್ಷರು : ವರದಿ ಬಂದಿರುವುದು ಹೌದೆ? ಅದರ ಪ್ರಕಾರ ಪರಿಹಾರ ಕೊಡಿ ಎಂದು ಕೇಳಿ

(ಗೊಂದಲ)

ಅಧ್ಯಕ್ಷರು : ದತ್ತಾರವರೆ, ಒಬ್ಬರು ನಿಂತುಕೊಂಡು ಮಾತನಾಡುತ್ತಾರೆ ನೀವು ಉಪನಾಯಕರಿದ್ದೀರಿ, ಈ ರೀತಿಯಾಗಿ ಮಾಡಿದರೆ ಹೇಗೆ?

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ಅರಕಲಗೂಡು, ಬೇಲೂರು, ಹೀಗೆ ಬೇರೆ ಎರಡು ತಾಲ್ಲೂಕುಗಳು ಸೇರಿವೆ. ಅದೇ ರೀತಿಯಾಗಿ ಅರಸೀಕೆರೆ ಸೇರಿಸಿ

ಎನ್ನುವುದು ತಮ್ಮ ಅಭಿಪ್ರಾಯ. ತಾವೇನು ಕೆವಲ ತಾಲ್ಲೂಕುಗಳನ್ನು ಸೇರಿಸ ಬೇಕು ಎಂದು ಹೇಳಿತ್ತೀರಿ, ಈ ಬಗ್ಗೆ ನಾವು ಯಾವುದೇ ತರಹ ತಾರತಮ್ಯ ಮಾಡಿಲ್ಲ. ಒಂದು ನಿಮಿಷ ರೇವಣ್ಣನವರೆ, ತಾವು ಮೊದಲು ಪ್ರಶ್ನೆ ಕೇಳು ತ್ತೀರೋ ಅಥವಾ ನಾನು ಉತ್ತರ ನೀಡಲೋ ಹೇಳಿ. ಬರಪೀಡಿತ ಪ್ರದೇಶ ವೆಂದು ಘೋಷಣೆ ಮಾಡುವುದಕ್ಕೆ ಕೇಂದ್ರ ಸರ್ಕಾರ ಕೆಲವು ಮಾನ ದಂಡಗಳನ್ನು ರೂಪಿಸಿದೆ.

ಅಧ್ಯಕ್ಷರು : ಅವರು ಅದನ್ನು ಕೇಳಲಿಲ್ಲ. ಜಿಲ್ಲಾಧಿಕಾರಿಗಳು ನಿಮಗೆ ವರದಿಯನ್ನು ಸಲ್ಲಿಸಿದ್ದಾರೆಯೇ?

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ನಾನು ಅದರ ಬಗ್ಗೆ ಹೇಳುತ್ತಿದ್ದೇನೆ. ಸಚಿವ ಸಂಪುಟದ ಉಪ ಸಮಿತಿಯವರು 64 ಪ್ರದೇಶಗಳಲ್ಲಿ ಬರಪೀಡಿತ ಪ್ರದೇಶವೆಂದು ಏನು ಘೋಷಣೆ ಮಾಡಿದ್ದೇವೆ, ಅದನ್ನು ಕೇಂದ್ರ ಸರ್ಕಾರದ ಮಾನದಂಡದ ಆಧಾರದ ಮೇಲೆ ಮಾಡಿದ್ದೇವೆ. ಎಲ್ಲಾ ಜಿಲ್ಲೆಗಳಿಂದ ಮಾಹಿತಿ ತರಿಸಿ ಸಮಿತಿಯಲ್ಲಿ ಆ ಬಗ್ಗೆ ಚರ್ಚೆ ಮಾಡಿ ಅವರ ಮಾನದಂಡಗಳೇನು ಇದೆ? ಅದರಲ್ಲಿ ಎರಡು ಅಂಶಗಳಿದ್ದರೆ ಆ ಪ್ರದೇಶವನ್ನು ಬರಪೀಡಿತ ಪ್ರದೇಶವೆಂದು ಘೋಷಿಸಬೇಕು. (1) ವಾಡಿಕೆ ಮಳೆ ಅಂದರೆ, ವಾಸ್ತವವಾಗಿ ಬರತಕ್ಕಂಥ ಮಳೆಗಿಂತ ಶೇಕಡ 20 ರಷ್ಟು ಕೊರತೆ ಇರಬೇಕು (2) ಸತತವಾಗಿ ನಾಲ್ಕುವಾರಗಳ ಶುಷ್ಕ ವಾತಾವರಣ ಇರಬೇಕು (3) ತೇವಾಂಶದ ಕೊರತೆ ಶೇಕಡ 50 ಕ್ಕಿಂತ ಕಡಿಮೆ ಇರಬೇಕು. ಈ ಮಾನದಂಡಗಳ ಆಧಾರದ ಮೇಲೆಯೇ ನಾವು ಜಿಲ್ಲಾಧಿಕಾರಿಗಳು ಕಳುಹಿಸಿರುವ ವರದಿಯನ್ನು ಇಟ್ಟುಕೊಂಡು ಉಪ ಸಮಿತಿಯವರು 64 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಿದ್ದೇವೆ. ಈಗಾಲೂ ಕೂಡ ಅವರ ಅನಿಸಿಕೆ ಯಂತೆ ಕೆಲವು ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಸ ಬೇಕೆಂದು ಅವರೇನು ಹೇಳುತ್ತಿದ್ದಾರೆ, ಈ ರೀತಿ ನಾವು ಮಾಡಬೇಕಾದರೆ 15–10–2013ರ ವರೆಗೆ ಈ ವಾತಾವರಣ ಏನಿತ್ತು ಅದನ್ನು ಪರಿಗಣಿಸಿ ನಾವು ಘೋಷಣೆ ಮಾಡಿದ್ದೇವೆ. ಈಗಲೂ ಕೂಡ ತಾವು ಹೇಳಿರುವುದು ಈ ಒಂದು ಮಾನದಂಡದ ಅಡಿಯಲ್ಲಿ ಬಂದರೆ ಖಂಡಿತ ಮಾಡುತ್ತೇವೆ.

ಅಧ್ಯಕ್ಷರು: ಮಂತ್ರಿಗಳೇ, ರೇವಣ್ಣನವರು ಕೇಳಿದ್ದು ಜಿಲ್ಲಾಧಿಕಾರಿಗಳಿಂದ ವರದಿ ಕಳುಹಿಸಿದ್ದಾರೆ ಎಂದು. ಅದು ತಮಗೆ ಬಂದಿದೆಯೇ?

ಶ್ರೀ ಹೆಚ್.ಡಿ ರೇವಣ್ಣ : ಮಾನ್ಯ ಮುಖ್ಯಮಂತ್ರಿಗಳ ಸಮ್ಮುಖದಲ್ಲಿಯೇ ಅವರ ಅಧ್ಯಕ್ಷತೆಯಲ್ಲಿ ಸಭೆ ಮಾಡಿ ಅರಸೀಕೆರೆಯನ್ನು ಬರಪ್ರದೇಶವೆಂದು ಡಿಕ್ಲೇರ್ ಮಾಡುತ್ತೇನೆಂದು ಹೇಳಿದ್ದಾರೆ.

ಅಧ್ಯಕ್ಷರು : ನೀವು ಕೇಳಿದ ಪ್ರಶ್ನೆಗೆ ಹೇಳ್ರಿ.

ಶ್ರೀ ಹೆಚ್.ಡಿ.ರೇವಣ್ಣ : ಅವರು ಹೇಳುತ್ತಿಲ್ಲ. ಅಲ್ಲಿ ಅರಕಲಗೂಡು ಬೇಲೂರಿನಲ್ಲಿ ಜಾಸ್ತಿ ಮಳೆಯಾಗಿದೆ.

ಅಧ್ಯಕ್ಷರು : ನೀವು ಕೇಳಿದ್ದು ಏನ್ರೀ? ಜಿಲ್ಲಾಧಿಕಾರಿಗಳು ಒಂದು ವರದಿ ಸಲ್ಲಿಸಿದ್ದಾರೆಯೆ? ಸಲ್ಲಿಸಿದ್ದರೆ ಅದಕ್ಕೆ ಏನು ಕ್ರಮ ಕೈಗೊಂಡಿದ್ದೀರಿ? ಇಷ್ಟೇ? ಅಲ್ಲವೇ ನಿಮ್ಮ ಪ್ರಶ್ನೆ.

ಶ್ರೀ ಹೆಚ್.ಡಿ ರೇವಣ್ಣ : ಅಷ್ಟೇ ಸಾರ್ ಜಿಲ್ಲಾದಿಕಾರಿಗಳ ವರದಿಗೆ ಉತ್ತರ ಹೇಳಲಿ

ಶ್ರೀ ವೈ.ಎಸ್.ವಿ.ದತ್ತಾ : ನಾನು ಪ್ರಶ್ನೆ ಕೇಳುತ್ತೇನೆ, ಎರಡೂ ಸೇರಿಸಿ ಉತ್ತರ ಹೇಳಿ.

ಶ್ರೀ ಹೆಚ್ ಡಿ.ರೇವಣ್ಣ : ಜಿಲ್ಲಾಧಿಕಾರಿಗಳ ವರದಿ ಇದೆಯೋ ಇಲ್ಲವೋ ಅದನ್ನು ಹೇಳಿ.

ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಜಿಲ್ಲಾಧಿಕಾರಿಗಳ ವರದಿಯಲ್ಲಿ ಏನು ಇದೆ ನೋಡಿಬಿಡಿ.

ಅಧ್ಯಕ್ಷರು : ನೀವು ಎರಡು ತಪ್ಪು ಮಾಡುತ್ತೀರಿ. ಜಿಲ್ಲಾಧಿಕಾರಿಗಳಿಂದ ವರದಿ ಬಂದಿದೆಯೋ ಇಲ್ಲವೋ ಎಂದು ಪ್ರಶ್ನೆ ಅಲ್ಲವೆ?

ಶ್ರೀ ಹೆಚ್.ಡಿ.ರೇವಣ್ಣ : ಜಿಲ್ಲಾಧಿಕಾರಿಗಳ ವರದಿಗೆ ಬೆಲೆ ಇದೆಯೋ ಇಲ್ಲವೋ?

ಅಧ್ಯಕ್ಷರು: ಅದು ಬೇರೆ ಮಾತು, ಅದನ್ನು ಇದರಲ್ಲಿ ಕೇಳಿದರೆ ಹೇಗೆ?

ಶ್ರೀ ಹೆಚ್.ಡಿ.ರೇವಣ್ಣ : ಬರಗಾಲ ಎಂದು ಡಿಕ್ಲೇರ್ ಮಾಡಬೇಕು.

ಅಧ್ಯಕ್ಷರು : ಜಿಲ್ಲಾಧಿಕಾರಿಗಳ ವರದಿಯ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ ಎಂದು ಕೇಳಿ.

ಶ್ರೀ ಹೆಚ್.ಡಿ.ರೇವಣ್ಣ : ಜಿಲ್ಲಾಧಿಕಾರಿಗಳು ಅರಸೀಕೆರೆ, ಚನ್ನರಾಯ ಪಟ್ಟಣ, ದುದ್ದ ಶಾಂತಿಗ್ರಾಮ, ಈ ಪ್ರದೇಶಗಳನ್ನು ಬರ ಪ್ರದೇಶ ಎಂದು ಘೋಷಣೆ ಮಾಡಿ ಎಂದು ವರದಿ ಕೊಟ್ಟಿದ್ದಾರೆ.

ಶ್ರೀ ಸಿ.ಎನ್.ಬಾಲಕೃಷ್ಣ : ಚನ್ನರಾಯಪಟ್ಟಣ, ಅರಸೀಕೆರೆ ಕೂಡ ಬರಪ್ರದೇಶವೆಂದು ಘೋಷಣೆ ಮಾಡಿ ಎಂದು ಡಿಸಿಯವರು ರೆಕಮೆಂಡ್ ಮಾಡಿದ್ದಾರೆ. ದಯಮಾಡಿ ಮಾನ್ಯ ಕಂದಾಯ ಸಚಿವರು ಈ ಬಗ್ಗೆ ಗಮನ ಹರಿಸಿ, ನಮ್ಮ ಎರಡು ಮೂರು ತಾಲ್ಲೂಕುಗಳನ್ನು ಬರಪ್ರದೇಶವೆಂದು ಸೇರ್ಪಡೆ ಮಾಡಿ ಘೋಷಣೆ ಮಾಡಿ ಎಂದು ಮನವಿ ಮಾಡುತ್ತೇವೆ

ಶ್ರೀ ವೈ.ಎಸ್.ವಿ.ದತ್ತಾ : ಮಾನ್ಯ ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಗೆ ಭೇಟಿ ಕೊಟ್ಟಾಗ ಜಿಲ್ಲಾಧಿಕಾರಿಗಳು ಹೇಳಿದ್ದಾರೆ. ಕಡೂರು 20 ವರ್ಷಗಳಿಂದ ನಿರಂತರವಾಗಿ ಬರಪೀಡಿತ ಪ್ರದೇಶವಾಗಿದ್ದು ಖಂಡಿತವಾಗಿ ಅದನ್ನು ಮಾಡಬೇಕು.

ಅಧ್ಯಕ್ಷರು : ಈ ಪ್ರಶ್ನೆಯಲ್ಲಿ ಅದು ಇದೆಯೇ?

ಶ್ರೀ ವೈ.ಎಸ್.ವಿ.ದತ್ತಾ : ಬರದ ವಿಷಯವಾಗಿರುವುದರಿಂದ ಮಾನ್ಯ ಮಂತ್ರಿಗಳ ಗಮನಕ್ಕೆ ತಂದೆ.

ಅಧ್ಯಕ್ಷರು : ಲೇಟಾಗಿದೆ, ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ವೈ.ಎಸ್ ವಿದತ್ತಾ : ಬರಪೀಡಿತ ಪ್ರದೇಶವೆಂದು ಘೋಷಿಸಲು ಮಾನ್ಯ ಮುಖ್ಯಮಂತ್ರಿಗಳು ಪುನರ್ ಪರಿಶೀಲಿಸಲಾಗುವುದೆಂದು ಭರವಸೆ ಕೊಟ್ಟಿದ್ದೀರಿ. ನೀವು ಒಂದು ಮಾತು ಹೇಳಿದರೆ ನಮಗೆ ಧೈರ್ಯ ಬರುತ್ತದೆ.

ಆ ಪಟ್ಟಿಗೆ ಸೇರಿಸುತ್ತೇವೆಂದು ತಾವು ಹೇಳಿಬಿಡಿ ತಾವು ದಯವಿಟ್ಟು ಕಂದಾಯ ಮಂತ್ರಿಗಳಿಗೆ ಸಪೋರ್ಟ್ ಮಾಡಿ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಕಂದಾಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಇದೆ ಆ ಸಮಿತಿ ಕೇಂದ್ರ ಸರ್ಕಾರದ ಮಾನದಂಡಗಳು, ಜಿಲ್ಲಾಧಿಕಾರಿಗಳ ವರದಿ, ಮಳೆಯ ಪ್ರಮಾಣ, ಅಲ್ಲಿ ಎಷ್ಟು ದಿನಗಳಿಂದ ಮಳೆ ಬಿದ್ದಿಲ್ಲ ಈ ಎಲ್ಲಾ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಚರ್ಚೆ ಮಾಡಿ 64 ಪ್ರದೇಶಗಳನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಿದ್ದಾರೆ. ನೀವು ಹೇಳುತ್ತಿರುವುದು, ಜಿಲ್ಲಾಧಿಕಾರಿಗಳು ತಮ್ಮ ವರದಿಯಲ್ಲಿ ಅರಕಲಗೂಡು, ಹೊಳೆನರಸೀಪುರ, ಚನ್ನರಾಯಪಟ್ಟಣ, ಅರಸೀಕೆರೆ, ಕಡೂರು ಹೀಗೆ ಕೆಲವು ಭಾಗಗಳನ್ನು ಬರಪ್ರದೇಶವೆಂದು ಘೋಷಿಸಲು ಶಿಫಾರಸ್ಸು ಮಾಡಿದ್ದಾರೆಂದು ಹೇಳುತ್ತಿದ್ದೀರಿ. ಇದನ್ನು ಮತ್ತೆ ಆ ಸಮಿತಿಯವರು ಪರಿಶೀಲನೆ ಮಾಡಿ ಶಫಾರಸ್ಸು ಮಾಡಿದರೆ ಆ ಪ್ರದೇಶಗಳನ್ನು ಬರಪೀಡಿತ ಪ್ರದೇಶಗಳ ಪಟ್ಟಿಯಲ್ಲಿ ಸೇರಿಸುತ್ತಾರೆ

ಶ್ರೀ ವೈ.ಎಸ್.ವಿ ದತ್ತಾ : ಕೆಲವು ಕಡೆ ಜಿಲ್ಲಾಧಿಕಾರಿಗಳು ಇನ್ನೂ ವರದಿ ಕಳುಹಿಸಿಲ್ಲ. ತಕ್ಷಣ ಕಳುಹಿಸುವುದಕ್ಕೆ ಪ್ರಧಾನ ಕಾರ್ಯದರ್ಶಿಗಳಿಗೆ ಸೂಚನೆ ಕೊಡಿ.

ಶ್ರೀ ಸಿದ್ಧರಾಮಯ್ಯ : ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಂಡು ಕೇಂದ್ರ ಸರ್ಕಾರದ ಮಾನದಂಡಗಳ ಆಧಾರದ ಮೇಲೆ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ತೀರ್ಮಾನ ಮಾಡುತ್ತೇವೆ.

ಅಧ್ಯಕ್ಷರು : ಓ.ಕೆ. ಮುಂದಿನ ಪ್ರಶ್ನೆ ಕೃಷ್ಣಪ್ಪನವರು ಕೇಳಿ. ಅವರು ಇಲ್ಲ ಮುಂದಿನ ಪ್ರಶ್ನೆ ಮಾಲಕರೆಡ್ಡಿಯವರು ಕೇಳಿ.

Social SecuritySchemes

92 ಡಾ.ಮಾಲಕರೆಡ್ಡಿ ಎ.ಬಿ.(ಯಾದಗಿರಿ) . ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?